ಇದ್ದರೆ ಜೀವಕೋಶಗಳು ಕ್ಯಾನ್ಸರ್‌ಗೆ ಬದಲಾವಣೆಗೊಳ್ಳುತ್ತಿದ್ದರೆ ಈ ಲಸಿಕೆಗಳು ಪರಿಣಾಮಕಾರಿಯಲ್ಲ. ವ್ಯಾಕ್ಸಿನೇಷನ್ ಮಾಡಿಸಿಕೊಂಡವರು ಸರ್ವಿಕಲ್ ಕ್ಯಾನ್ಸರ್ ಬರುವುದೇ ಇಲ್ಲವೆಂದು ನಿರಾಳವಾಗಿದ್ದು ಸ್ವಚ್ಛಂದ ಲೈಂಗಿಕತೆಗೂ ನಾಂದಿ ಹಾಡಬಹುದೆಂಬ ಆತಂಕವೂ ಇದೆ. ಅಲರ್ಜಿ, ಇಂಜೆಕ್ಷನ್ ತೆಗೆದುಕೊಂಡ ಜಾಗದಲ್ಲಿ ನೋವು (ತಾತ್ಕಾಲಿಕ) ತಲೆಸುತ್ತು, ಜ್ವರ, ವಾಂತಿ ಇತ್ಯಾದಿ ದುಷ್ಪರಿಣಾಮಗಳು ಮಹತ್ವದಲ್ಲದಿದ್ದರೂ ದೀರ್ಘಕಾಲದ ದುಷ್ಪರಿಣಾಮಗಳ ಬಗ್ಗೆ ಇನ್ನೂ ಸಾಕಷ್ಟು ಅಧ್ಯಯನಗಳ ಮಾಹಿತಿ ದೊರೆಯಬೇಕು.

11–12 ವರ್ಷದ ಹೆಣ್ಣು ಮಕ್ಕಳಿಗೆ ಅಂದರೆ, ಲೈಂಗಿಕವಾಗಿ ಸಕ್ರಿಯವಾಗುವ ಮೊದಲೇ ಈ ವ್ಯಾಕ್ಸಿನನ್ನು ಕೊಡಬೇಕು. ಕೆಲವೊಮ್ಮೆ ಕ್ಯಾಚಪ್ ವ್ಯಾಕ್ಸಿನೇಷನ್ ಎಂದು 926 ವರ್ಷದೊಳಗೆ ಕೊಡಬಹುದು. ಗರ್ಭಿಣಿಯರಲ್ಲಿ ಕೊಡಬಾರದು. ಎಚ್.ಐ.ವಿ ಸೋಂಕಿಗೆ ಒಳಗಾದವರಲ್ಲಿ ಕೊಡಬಹುದು. ಸರ್ವಿರಾಕ್ಸ್ ವ್ಯಾಕ್ಸಿನ್ ಶೇ.70ರಷ್ಟು ಹೆಚ್.ಪಿ.ವಿ ಸೋಂಕಿನ ವಿರುದ್ಧ ರಕ್ಷಣೆ ದೊರಕಿಸಿದರೆ ಗರ್ಡಾಸಿಲ್ ಶೇ.75ರಷ್ಟು ಸೋಂಕಿನ ವಿರುದ್ಧ ಹಾಗೂ ಗರ್ಡಾಸಿಲ್ 9 ಶೇ.90ರಷ್ಟು ರಕ್ಷಣೆ ದೊರಕಿಸುತ್ತದೆ.

## ಗರ್ಭಕೊರಳಿನ ಕ್ಯಾನ್ಸರ್‌ನ ರೋಗ ಲಕ್ಷಣಗಳು

ಹೆಚ್ಚಿನ ಸಂದರ್ಭದಲ್ಲಿ ಯಾವುದೇ ರೋಗಲಕ್ಷಣಗಳು ಇರದೇ ಇದ್ದು ಕೆಲವೊಮ್ಮೆ ಕಿಬ್ಬೊಟ್ಟೆ ನೋವು, ಕೆಂಪುಮಿಶ್ರಿತ ನೀರಿನಂತಹ ವಾಸನೆಯುಳ್ಳ ಸ್ರಾವ, ಕೆಲವೊಮ್ಮೆ ಲೈಂಗಿಕ ಸಂಪರ್ಕದ ನಂತರ ರಕ್ತಸ್ರಾವವಾಗಬಹುದು. ಹೆಚ್ಚಿನ ಸಂದರ್ಭದಲ್ಲಿ ಎರಡು ಋತುಚಕ್ರದ ಮಧ್ಯೆ ಮೇಲಿಂದ ಮೇಲೆ ರಕ್ತಸ್ರಾವವಾಗಬಹುದು. ಕ್ಯಾನ್ಸರ್ ಮೂತ್ರಕೋಶಕ್ಕೆ ಹರಡಿದ್ದಾಗ ಪದೇ ಪದೇ ಮೂತ್ರವಿಸರ್ಜನೆ ಮಾಡಬೇಕೆಂದೆನಿಸಬಹುದು. ಹೆಚ್ಚಿನ ಸಂದರ್ಭದಲ್ಲಿ ಸರ್ವೈಕಲ್ ಕ್ಯಾನ್ಸರ್‌ನಿಂದ ಸಾವುಂಟಾಗುವುದು ಮೂತ್ರಪಿಂಡದ ವೈಫಲ್ಯತೆಯಿಂದ. ವಿಶ್ವಆರೋಗ್ಯ ಸಂಸ್ಥೆಯು ಸರ್ವೈಕಲ್ ಕ್ಯಾನ್ಸರನ್ನು ತಡೆಗಟ್ಟಬಹುದಾದ ಕ್ಯಾನ್ಸರ್ ಎಂದು ಸದಾ ಬಿಂಬಿಸುತ್ತದೆ. ಏಕೆಂದರೆ, ಈ ರೋಗ ಬರುವ ಬಹಳ ದಿನಗಳ ಮೊದಲೇ ಅದರ ಪೂರ್ವ ಚಿಹ್ನೆಗಳನ್ನು ಕಂಡುಹಿಡಿದು ಸೂಕ್ತಚಿಕಿತ್ಸೆ ನೀಡಬಹುದು. ಇದಕ್ಕೆ ಸ್ಕ್ರೀನಿಂಗ್ ಪ್ಯಾಪ್‌ಸ್ಮಿಯರ್ ಎಂಬ ಸಾರ್ವತ್ರಿಕ ಸ್ಕ್ರೀನಿಂಗ್ ಪರೀಕ್ಷೆ ಪ್ರಚಲಿತದಲ್ಲಿದೆ.

ಈ ಪರೀಕ್ಷೆಯಿಂದ ಕ್ಯಾನ್ಸರ್ ಬರಬಹುದೆಂಬ ಮುನ್ಸೂಚನೆ ಬಂದ ಮೇಲೆ ಇಡೀ ಗರ್ಭಕಂಠಕ್ಕೆ ಕ್ಯಾನ್ಸರ್ ಹರಡಲು 10 ವರ್ಷಗಳಾದರೂ ಬೇಕಾಗುತ್ತದೆ. ಈ ಸಮಯದಲ್ಲಿ ಸೂಕ್ತವಾದ ಹಾಗೂ ನಿರ್ದಿಷ್ಟ ಚಿಕಿತ್ಸೆಗಳನ್ನು ತಜ್ಞವೈದ್ಯರಿಂದ ಪಡೆಯಬಹುದು. ಈ ಪ್ಯಾಪ್‌ಸ್ಮಿಯರನ್ನು 21ನೇ ವರ್ಷಕ್ಕೆ ಆರಂಭಿಸಿ ನೆಗೆಟಿವ್ ಎಂದು ವರದಿ ಬಂದ ಮೇಲೆ ಪ್ರತಿ ಮೂರು ವರ್ಷಕ್ಕೊಮ್ಮೆ 30 ವರ್ಷದವರೆಗೆ ಮಾಡಿಸಬೇಕು. ನಂತರ ಪ್ಯಾಪ್ ಪರೀಕ್ಷೆ ಪಾಸಿಟಿವ್ ಎಂದು ಬಂದರೆ ಪ್ಯಾಪ್ ಜೊತೆಗೆ ಹೆಚ್.ಪಿ.ವಿ.ಡಿ.ಎನ್.ಎ ಪರೀಕ್ಷೆಯನ್ನು ಮಾಡಿಸುವುದಾದರೆ 5 ವರ್ಷಕ್ಕೊಮ್ಮೆಯಾದರೂ ಮಾಡಿಸಬೇಕು. ಸ್ಕ್ರೀನಿಂಗ್ ಪರೀಕ್ಷೆಯು 65 ವರ್ಷದವರೆಗೂ ಮುಂದುವರೆಯಬೇಕು. ಕೊನೆಯ 10 ವರ್ಷದ ವರದಿ ಸಂದೇಹಾಸ್ಪದವಾಗಿದ್ದಲ್ಲಿ 75 ವರ್ಷದವರೆಗೂ ಮುಂದುವರಿಸಬೇಕು ಮತ್ತು ವ್ಯಾಕ್ಸಿನ್ ಹಾಕಿಸಿದ್ದರೂ ಕೂಡ ಮುಂದುವರೆಸಬೇಕು. ಕೆಲವೊಮ್ಮೆ ಸಂದೇಹವಿದ್ದಾಗ ಪ್ಯಾಪ್ ಪಾಸಿಟಿವ್ ಬಂದರೆ ಕಾಲ್ಪೋಸ್ಕೋಪಿ ಮೂಲಕ ಬಯಾಪ್ಸಿ ಬೇಕಾಗಬಹುದು.

ದುರದೃಷ್ಟವೆಂದರೆ ಇಂತಹ ಸರಳ ಹಾಗೂ ಕಡಿಮೆ ವೆಚ್ಚದ ಸ್ಕ್ರೀನಿಂಗ್ ಪರೀಕ್ಷೆಯು ಎಲ್ಲೆಡೆ ಲಭ್ಯವಿಲ್ಲ. ಅದರಲ್ಲೂ ಹಳ್ಳಿಗಾಡಿನ ಜನರಿಗೆ, ಅಶಿಕ್ಷಿತರಿಗೆ ಈ ಬಗ್ಗೆ ತಿಳುವಳಿಕೆ ಕೂಡ ಬಹಳ ಕಡಿಮೆ. ಹೆಚ್ಚಿನ ಸಂದರ್ಭದಲ್ಲಿ ಈ ಕ್ಯಾನ್ಸರ್ ತಡವಾಗಿ ಪತ್ತೆಯಾಗುತ್ತದೆ. ಹಳ್ಳಿಗಾಡಿನಲ್ಲಿ ಸುಲಭವಾದ ವಿ.ಐ.ಎ ಅಂದರೆ ವಿಷ್ಯೂಯಲ್ ಇನ್‌ಸ್ಪೆಕ್ಷನ್ ವಿತ್ ಅಸಿಟಿಕ್ ಆಸಿಡ್ ಮತ್ತು ವಿ.ಐ.ಎಲ್.ಐ ಅಂದರೆ ವಿಷ್ಯೂಯಲ್ ಇನ್‌ಸ್ಪೆಕ್ಷನ್ ವಿತ್ ಲೂಗಾಲ್ ಅಯೋಡಿನ್ ಎನ್ನುವ ಪರೀಕ್ಷೆಯನ್ನು ಉತ್ತೇಜಿಸುತ್ತದೆ. ಸ್ಕ್ರೀನಿಂಗ್ ಪರೀಕ್ಷೆಗೆ ಒಳಗಾಗಿ ಸೂಕ್ತ ಚಿಕಿತ್ಸೆಯಾದ ಕ್ರಯೋಕಾಟರಿ, ಕೋನೈಷೇಶನ್ ಇತ್ಯಾದಿ ಚಿಕಿತ್ಸೆ ತಜ್ಞರಿಂದ ಮಾಡಿಸಬಹುದು. ಗರ್ಭಕೋಶದ ಕ್ಯಾನ್ಸರ್ ಅಥವಾ ಎಂಡೋಮೆಟ್ರಿಯಲ್ ಕ್ಯಾನ್ಸರ್‌ಗೆ ಯಾವುದೇ ಸ್ಕ್ರೀನಿಂಗ್ ಪರೀಕ್ಷೆ ಅಥವಾ ವ್ಯಾಕ್ಸಿನೇಷನ್ ಇಲ್ಲ.

(ಲೇಖಕಿ ಭದ್ರಾವತಿಯಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ. ಸಂಪರ್ಕ: 9480353878)




## ಸಿಕ್ಕಿಂನಲ್ಲಿ ಉಚಿತ ವ್ಯಾಕ್ಸಿನ್

ಸಣ್ಣ ರಾಜ್ಯವಾದರೂ ಪ್ಲಾಸ್ಟಿಕ್‌ಮುಕ್ತ ರಾಜ್ಯವೆನಿಸಿಕೊಳ್ಳುವಲ್ಲಿ ದೊಡ್ಡ ದೊಡ್ಡ ಹೆಜ್ಜೆಗಳನ್ನಿಟ್ಟ ಸಿಕ್ಕಿಂ ಇನ್ನೊಂದು ಹೊಸ ಹೆಜ್ಜೆ ಇಟ್ಟು ಸುದ್ದಿ ಮಾಡಿದೆ. ಅದೇನೆಂದರೆ ಸಿಕ್ಕಿಂನ ರಾಜ್ಯದಾದ್ಯಂತ 9 ರಿಂದ 14 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಹ್ಯೂಮನ್ ಪ್ಯಾಪಿಲೋಮಾ ವೈರಸ್ (ಹೆಚ್.ಪಿ.ವಿ) ಅಂದರೆ ಗರ್ಭಕೊರಳಿನ ಕ್ಯಾನ್ಸರ್ ಉಂಟು ಮಾಡಲು ಮುಖ್ಯ ಕಾರಣವಾದ ಎಚ್.ಪಿ.ವಿ ಸೋಂಕಿನ ವಿರುದ್ಧ ಸರ್ಕಾರದಿಂದ ಉಚಿತವಾಗಿ ಹಾಕಿಸುವ ಯೋಜನೆ ಜಾರಿಮಾಡಿರುವ ಪ್ರಯತ್ನವನ್ನು ಭಾರತದಲ್ಲೇ ಮೊದಲು ಮಾಡಿದ ರಾಜ್ಯವೆಂಬ ಹೆಗ್ಗಳಿಕೆ ಸಿಕ್ಕಿದೆ.

ಇನ್ನು ಕೆಲವೇ ದಿನದೊಳಗಾಗಿ ಸುಮಾರು 32 ಸಾವಿರ ಮಹಿಳೆಯರು ಈ ವ್ಯಾಕ್ಸಿನ್ ಪಡೆಯಲಿದ್ದಾರೆ. ಆರು ತಿಂಗಳು ಬಿಟ್ಟು ಇನ್ನೊಂದು ಡೋಸ್ ಎಲ್ಲರಿಗೂ ಹಾಕಲಾಗುತ್ತದೆ. ಇದು ಸಿಕ್ಕಿಂನ ಆರೋಗ್ಯ, ಮಾನವ ಸೇವೆ, ಕುಟುಂಬ ಕಲ್ಯಾಣ ಇಲಾಖೆ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯುನಿಸೆಫ್‌ನ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು 3000ರೂ ಬೆಲೆಯ ವ್ಯಾಕ್ಸಿನ್‌ನ್ನು ಯುನಿಸೆಫ್ 400ರೂಗೆ ಸರ್ಕಾರಕ್ಕೆ ಪೂರೈಸಿ ಸರ್ಕಾರ ಇದನ್ನು ಉಚಿತವಾಗಿ ಪೂರೈಸುತ್ತಿದೆ.

## ಅಪಾಯಕಾರಿ ಅಂಶಗಳು

- ಬಹುಲೈಂಗಿಕ ಸಂಗಾತಿಗಳನ್ನು ಹೊಂದಿರುವುದು.
- ಹೆಚ್ಚು ಲೈಂಗಿಕ ಸಂಗಾತಿಗಳಿರುವ ಪುರುಷರೊಡನೆ ಲೈಂಗಿಕ ಸಂಪರ್ಕ ಬೆಳೆಸುವುದು.
- ಕುಂದಿದ ರೋಗನಿರೋಧಕ ಶಕ್ತಿ (ಎಚ್.ಐ.ವಿ, ಅಂಗಾಂಗ ದಾನ ಪಡೆಯುವುದು)
- ಚರ್ಮದಲ್ಲಿ ಬಿರುಕು ಬಿಟ್ಟಿದ್ದಾಗ ಜನನಾಂಗದ ನರೋಲಿ ಇರುವವರೊಡನೆ ನೇರ ಸಂಪರ್ಕ ಮಾಡುವುದು.
- ಬೇಗನೆ ಮದುವೆಯಾಗಿ ಚಿಕ್ಕವಯಸ್ಸಿನಲ್ಲೇ ಲೈಂಗಿಕ ಸಂಪರ್ಕವುಂಟಾಗುವುದು ಹಾಗೂ ಪದೇ ಪದೇ ಮಕ್ಕಳನ್ನು ಹೆರುವುದು.
- ಹೆರಿಗೆಗಳ ನಡುವಿನಲ್ಲಿ ಅಂತರ ಇಲ್ಲದೇ ಇರುವುದು, ಹೆರಿಗೆ ಸಮಯದಲ್ಲಿ ಗರ್ಭಕೊರಳಿಗೆ ಉಂಟಾಗುವ ಗಾಯಗಳು.
- ಲೈಂಗಿಕ ಸ್ವಚ್ಛತೆ ಕಾಪಾಡಿಕೊಳ್ಳದೇ ಇರುವುದು.
- ಅಪೌಷ್ಟಿಕತೆ, ಧೂಮಪಾನ, ತಂಬಾಕು ಸೇವನೆ.
  ಎಚ್.ಐ.ವಿ ಸೋಂಕು ಸೇರಿದಂತೆ ಎಲ್ಲಾ ಲೈಂಗಿಕ ರೋಗಗಳು.
- ದೀರ್ಘಾವಧಿಯವರೆಗೆ ಹಾರ್ಮೋನು ಸಂತಾನ ನಿರೋಧಕ ಮಾತ್ರೆಗಳನ್ನು ತೆಗೆದುಕೊಳ್ಳುವುದು (ಅಂತವರಲ್ಲಿ ಅಡಿನೋಕಾರ್ಸಿನೋಮಾ ಉಂಟು ಮಾಡುವುದು)
- ಈ ಕ್ಯಾನ್ಸರ್ ಕಪ್ಪುಮಹಿಳೆಯರಲ್ಲಿ ಹೆಚ್ಚು ಕಂಡುಬಂದರೂ ಯಾವುದೇ ಅನುವಂಶೀಯ ಹಿನ್ನೆಲೆ ಇರುವುದಿಲ್ಲ ಮತ್ತು ಅಂಡಾಶಯ ಹಾಗೂ ಗರ್ಭಕೋಶಗಳ ಕ್ಯಾನ್ಸರಿನ ಹಾಗೆ ಹಾರ್ಮೋನು ಅವಲಂಬಿತವೂ ಅಲ್ಲ.